# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. : 48 ಫ್ರಾ.ಸಾ. : 35**

| | | |
|---|---|---|
| ಸಾಕ್ಷಿಯ ಹೆಸರು | : | ತುಕಾರಾಮ ಪರಮೇಶ್ವರಪ್ಪ ಬಣಕಾರ |
| ತಂದೆಯ ಹೆಸರು | : | ಪರಮೇಶ್ವರಪ್ಪ ಬಣಕಾರ |
| ವಯಸ್ಸು | : | 39 ವರ್ಷ |
| ಕೆಲಸ | : | ಸಿ.ಹೆಚ್.ಸಿ-1213, ಶಿರಸಿ ನಗರ ಪೊಲೀಸ್ ಠಾಣೆ |
| ವಾಸ | : | ಶಿರಸಿ |

**ದಿನಾಂಕಃ 21-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

1. 2017 ರಿಂದ 2023 ರವರೆಗೆ ಕಾರವಾರದ ನಗರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.21-10-2018 ರಂದು ನಾನು ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ, ತನಿಖಾಧಿಕಾರಿಗಳು ರಾತ್ರಿ 11.30 ಗಂಟೆಗೆ ಈ ಪ್ರಕರಣದ ಗುನ್ನಾ ನಂ.141/2018 ರ ಪ್ರಥಮ ವರ್ತಮಾನ ವರದಿಯನ್ನು ಮತ್ತು ದೂರನ್ನು ನ್ಯಾಯಾಲಯಕ್ಕೆ ತಲುಪಿಸುವಂತೆ ಸೂಚಿಸಿದ್ದು, ಆದರೆ ಆ ದಿನ ಠಾಣೆಯ ಸರ್ವರ್ ದುರಸ್ತಿಯಲ್ಲಿದ್ದ ಕಾರಣ, ರಾತ್ರಿ 1.00 ಗಂಟೆಗೆ ತನಿಖಾಧಿಕಾರಿಗಳು ಪ್ರಥಮ ವರ್ತಮಾನ ವರದಿಯನ್ನು ಮತ್ತು ದೂರನ್ನು ನನಗೆ ನೀಡಿದ್ದು, ಅದರಂತೆ ನಾನು ಮಾನ್ಯ ನ್ಯಾಯಾಧೀಶರ ನಿವಾಸಕ್ಕೆ ತೆರಳಿ ಮನೆಯ ಬೆಲ್ ಮಾಡಿದೆ, ಆದರೆ ಮಾನ್ಯ ನ್ಯಾಯಾಧೀಶರು ಬಾಗಿಲು ತೆರೆಯದ ಕಾರಣ, ಠಾಣೆಗೆ ವಾಪಾಸು ಬಂದು, ಮರುದಿನ ಅಂದರೆ ದಿ.22-10-2018 ರಂದು ಬೆಳಿಗ್ಗೆ 10.30 ಗಂಟೆಗೆ ನ್ಯಾಯಾಲಯದಲ್ಲಿ ಪ್ರಥಮ ವರ್ತಮಾನ ವರದಿಯನ್ನು ಮತ್ತು ದೂರನ್ನು ನೀಡಿರುತ್ತೇನೆ ಹಾಗೂ ಈ ಬಗ್ಗೆ ತನಿಖಾಧಿಕಾರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ–**

2. ಪ್ರಥಮ ವರ್ತಮಾನ ವರದಿಯನ್ನು ಮತ್ತು ದೂರನ್ನು ನೀಡಲು ವಿಳಂಬವಾದ ಬಗ್ಗೆ ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರಿದು, ನಾನು ತನಿಖಾಧಿಕಾರಿಯ ಮುಂದೆ ವಿಳಂಬವಾದ ಬಗ್ಗೆ ಹೇಳಿರುತ್ತೇನೆ, ಆದರೆ ಅದನ್ನು ಹೇಳಿಕೆಯಲ್ಲಿ ನಮೂದಿಸಿಲ್ಲ ಎಂದು ನುಡಿಯುತ್ತಾರೆ. ನಾನು ದಿ.17–10–2018 ರಂದು ನೀಡಿದ ಹೇಳಿಕೆಯಲ್ಲಿ "ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ಸಿವಿಲ್ ಮತ್ತು ಸಿ.ಜೆ.ಎಂ., ಕೋರ್ಟ್, ಕಾರವಾರ ರವರ ಬಳಿಗೆ ಕೊಟ್ಟು ಬರಲು ಹೇಳಿದಂತೆ ನಾನು ಅಂದು ರಾತ್ರಿ ಮಾನ್ಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ., ಕಾರವಾರ ರವರಿಗೆ ಭೇಟಿಯಾಗಿ ಪ್ರಥಮ ವರ್ತಮಾನ ವರದಿಯನ್ನು ಕೊಟ್ಟು ಬಂದಿರುತ್ತೇನೆ" ಎಂದು ಬರೆಯಲಾಗಿರುತ್ತದೆ ಎಂದರೆ ಸರಿ. ವಿಳಂಬವಾದ ಬಗ್ಗೆ ಯಾವುದಾದರೂ ದಾಖಲೆ ಮಾಡಿಕೊಂಡಿದ್ದೀರಾ? ಎಂದರೆ ಸಾಕ್ಷಿಯು ನಾನು ನನ್ನ ನೋಟ್ ಪುಸ್ತಕದಲ್ಲಿ ಬರೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಪ್ರಥಮ ವರ್ತಮಾನ ವರದಿ ನಂ.141/2018 ರ ಕ್ರಮ ಸಂಖ್ಯೆ 13 ರಲ್ಲಿ ದಿನಾಂಕವನ್ನು ತಿದ್ದುಪಡಿ ಮಾಡಲಾಗಿದೆ ಎಂದರೆ ಸರಿ, ಸದರಿ ತಿದ್ದುಪಡಿಯನ್ನು ಯಾರು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪ್ರಥಮ ವರ್ತಮಾನ ವರದಿ ಮತ್ತು ದೂರನ್ನು ವಿಳಂಬವಾಗಿ ತಲುಪಿಸಲು ಸುಳ್ಳು ಕಾರಣ ಹೇಳಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ–**

3. ನಮ್ಮ ತನಿಖಾಧಿಕಾರಿಗಳು ಪ್ರಥಮ ವರ್ತಮಾನ ವರದಿ ಮತ್ತು ದೂರನ್ನು ಸಲ್ಲಿಸುವಂತೆ ಲಿಖಿತವಾಗಿ ಸೂಚನೆ ನೀಡಿರುವುದಿಲ್ಲ, ಆದರೆ ಈ ಬಗ್ಗೆ ಠಾಣೆಯ ಡೈರಿಯಲ್ಲಿ ನಮೂದಾಗಿರುತ್ತದೆ. ದಿ.17–10–2018 ರಂದು ಹೇಳಿರುವಂತೆ ನಾನು ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿ. ಸದರಿ ಹೇಳಿಕೆಯನ್ನು ನಿ.ಡಿ–2 ಎಂದು ಗುರುತಿಸಲಾಯಿತು. ಈ ಪ್ರಕರಣದ ಪ್ರಥಮ ವರ್ತಮಾನ ವರದಿಯನ್ನು ಮತ್ತು ದೂರನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರದಿದ್ದರೂ ಸಲ್ಲಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಹೆಚ್.ಎಸ್.ಎಸ್. ವಕೀಲರಿಂದಃ–**

1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ